**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ**

**ಸಿ.ಸಿ ಸಂಖ್ಯೆಃ 1186/2022**

**ಸಿ.ಡಬ್ಲ್ಯೂ -4, ಪಿ.ಡಬ್ಲ್ಯೂ -3**

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರದೀಪ್ |
| ತಂದೆಯ ಹೆಸರು | : | ಮಹದೇವ್ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಶಾರದಪುರ ಗ್ರಾಮ, ಸಾಗರ ತಾಲ್ಲೂಕು. |

**ಪ್ರಮಾಣೀಕರಿಸಿದ ದಿನಾಂಕ :22.06.2026.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಚಾಸ 1 ನನ್ನ ತಾಯಿ. ಚಾಸ 5 ನನ್ನ ಸ್ನೇಹಿತ. ಆರೋಪಿತರ ಪರಿಚಯವಿರುತ್ತದೆ. ಮಂಕಳಲೆ ಗ್ರಾಮದ ಸರ್ವೇ ಸಂಖ್ಯೆ 64 ರಲ್ಲಿ 2 ಎಕರೆ 27 ಗುಂಟೆ ಜಮೀನು ಇರುತ್ತದೆ. ಅದರಲ್ಲಿ ಅಡಿಕೆಯನ್ನು ಬೆಳೆದಿರುತ್ತೇವೆ. ಹೀಗಿರುವಾಗ ದಿಃ09.05.2022 ರಂದು ನಾನು ಮತ್ತು ನನ್ನ ತಾಯಿ ಚಾಸ 1 ತೋಟಕ್ಕೆ ನೀರು ಬಿಡಬೇಕೆಂದು ಸಂಜೆ 4 ಗಂಟೆ ಸಮಯದಲ್ಲಿ ಮಂಕಳಲೆ ಗ್ರಾಮದ ಸರ್ವೇ ಸಂಖ್ಯೆ 64 ರ ತೋಟಕ್ಕೆ ಹೋಗಿದ್ದೆವು. ಆಗ ಚಾಸ 5 ಸಿಕ್ಕಿದ್ದ. ನಾನು ಆತನ ಜೊತೆ ಮಾತನಾಡುತ್ತಾ ನಿಂತಿದ್ದೆ. ನನ್ನ ತಾಯಿ ತೋಟಕ್ಕೆ ನೀರು ಬಿಡಲೆಂದು ಹೋಗಿದ್ದರು. ಆಗ ಸ್ವಲ್ಪ ಹೊತ್ತಿನಲ್ಲೇ ಚೀರಾಡುವ ಶಬ್ದ ಕೇಳಿಸಿತು. ನಾನು ಹೋಗಿ ನೋಡಿದಾಗ ಆರೋಪಿತರು ಚಾಸ 1 ರವರನ್ನು ಹಿಡಿದು ಎಳೆದು ತಳ್ಳಾಡುತ್ತಿದ್ದರು. ಆಗ ನಾನು ಜಗಳವನ್ನು ನಿಲ್ಲಿಸಿ ನನ್ನ ತಾಯಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆ. ಆರೋಪಿತರು ಜಗಳವಾಡುವಾಗ ನನ್ನ ತಾಯಿಗೆ ಬಹಳ ಕೆಟ್ಟದಾಗಿ ಬೈಯುತ್ತಿದ್ದರು. ಆರೋಪಿತರು ನನ್ನ ತಾಯಿಗೆ ಹೊಡೆದಿದ್ದರು. ನಂತರ ನಾನು ಮತ್ತು ಚಾಸ 5 ರವರು ಚಾಸ 1 ರವರನ್ನು ಸಾಗರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಿದೆವು. ನಂತರ ಪೊಲೀಸರು ಆಸ್ಪತ್ರೆಗೆ ಬಂದು ನನ್ನ ತಾಯಿಯ ಹೇಳಿಕೆಯನ್ನು ಪಡೆದುಕೊಂಡರು.

**(ಈ ಹಂತದಲ್ಲಿ ಸಾಕ್ಷಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 161 ರ ಹೇಳಿಕೆಗೆ ಭಾಗಶಃ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ- ಸ.ಸ.ಅ. ರವರಿಂದಃ-**

1. ಆರೋಪಿತರು ಸರ್ವೆ ಸಂಖ್ಯೆ 64 ರ ನಮ್ಮ ತೋಟಕ್ಕೆ ಹಾಕಿದ್ದ ಬೇಲಿಯನ್ನು ಕೀಳುತ್ತಿದ್ದರು ಎಂದರೆ ಸರಿ. ಆರೋಪಿತರು ಚಾಸ 1 ರವರನ್ನು ಅಡ್ಡಗಟ್ಟಿ ತಡೆದಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ ಚಾಸ 1 ರವರ ಗಂಟಲನ್ನು ಹಿಚುಕಿ ಕೈಯಿಂದ ಮೈ ಕೈ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿತರು ಜಮೀನಿನ ವಿಷಯಕ್ಕೆ ಬಂದರೆ ಕೊಲೆ ಮಾಡುವುದಾಗಿ ಚಾಸ 1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು.)**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.**